ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1549
2.	ಸದಸ್ಯರ ಹೆಸರು	: ಶ್ರೀ ಕಾಂತರಾಜ್
3.	ಉತ್ತರಿಸಬೇಕಾದ ದಿನಾಂಕ	: 19.03.2020
4.	ಉತ್ತರಿಸುವ ಸಚಿವರು	: ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ದಕ್ಷಿಣ ಪಿನಾಕಿನಿ ಪುನರ್ ಜೀವನಕ್ಕೆ ಭಾರಿ ಯೋಜನೆಯನ್ನು ರೂಪಿಸಲಾಗಿದೆಯೇ;	ದಕ್ಷಿಣ ಪಿನಾಕಿನಿ ನದಿ ಪುನರುಜ್ಜೀವನಕ್ಕೆ ಸರ್ಕಾರದಿಂದ ಪ್ರಸ್ತುತ ಯೋಜನೆಯನ್ನು ರೂಪಿಸಿರುವುದಿಲ್ಲ.
ಆ	ಹಾಗಿದ್ದಲ್ಲಿ, ದಕ್ಷಿಣ ಪಿನಾಕಿನಿ ಪುನರ್ ಜೀವನ ಟ್ರಸ್ಟ್ ಅನ್ನು ಯಾವಾಗ ನೋಂದಣಿ ಮಾಡಲಾಗಿದೆ ಮತ್ತು ಈ ಟ್ರಸ್ಟ್ ಬಗ್ಗೆ ಪೂರ್ಣ ಮಾಹಿತಿ ನೀಡುವುದು;	ದಕ್ಷಿಣ ಪಿನಾಕಿನಿ ಪುನರ್ ಜೀವನ ಟ್ರಸ್ಟ್ ಅನ್ನು ಭಾರತೀಯ ಟ್ರಸ್ಟ್ ಕಾಯ್ದೆಯ ನಿಬಂಧನೆಯನ್ವಯ ದಿನಾಂಕ:04.09.2017ರಂದು ನೋಂದಾಯಿಸಲಾಗಿದೆ.
ಇ	ಈ ಯೋಜನೆಗೆ ಖರ್ಚು ಮಾಡಲು ತಯಾರಿಸಲಾಗಿರುವ ಯೋಜನಾ ವೆಚ್ಚದ ಮೊತ್ತವೆಷ್ಟು ಹಾಗೂ ಈ ಹಣವನ್ನು ಯಾವ ರೀತಿ ಹೊಂದಿಸಲಾಗುವುದು; (ಮಾಹಿತಿ ನೀಡುವುದು)	ದಕ್ಷಿಣ ಪಿನಾಕಿನಿಯ ಪುನರುಜ್ಜೀವನ ಟ್ರಸ್ಟ್ ಪ್ರಸ್ತಾಪಿಸಿರುವ ಯೋಜನೆಗೆ ಕರ್ನಾಟಕ ಸರ್ಕಾರ(ವ್ಯವಹಾರ ನಿರ್ವಹಣೆ) ನಿಯಮಗಳು 1977ರ ಭಾಗ 2ರ ಸೆಕ್ಷನ್ 20(ಬಿ)(1)ರನ್ವಯ ಸಚಿವ ಸಂಪುಟ ತಾತ್ವಿಕ ಅನುಮೋದನೆ ನೀಡಿದೆ. ಅದರಂತೆ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ. ಅ) ಸದರಿ ಯೋಜನೆಗೆ ಅಗತ್ಯವಿರುವ ಆರ್ಥಿಕ ಸಂಪನ್ಮೂಲ/ನಿಧಿಯನ್ನು ಟ್ರಸ್ಟ್ ತಾನೇ ಸ್ವತ: ಸಿಎಸ್‌ಆರ್ ನಿಧಿ (CORPORATE SOCIAL RESPONSIBILITY-CSR) ಮತ್ತು ಟ್ರಸ್ಟ್ ಗಳಿಂದ ಕ್ರೋಡೀಕರಿಸುವುದು. ಹಾಗೂ ಆ) ಟ್ರಸ್ಟ್, ಈ ಯೋಜನೆಯ ಹಲವು ಚಟುವಟಿಕೆಗಳನ್ನು ಸರ್ಕಾರದ ಚಾಲ್ತಿಯಲ್ಲಿರುವ ಯೋಜನೆಗಳೊಂದಿಗೆ ಜೋಡಿಸಿಕೊಳ್ಳುವುದು, ಸರ್ಕಾರದ ಯಾವುದೇ ಇಲಾಖೆಯಿಂದ ಯಾವುದೇ ನಿರ್ಧಿಷ್ಟ ಹಣಕಾಸಿನ ನೆರವು ಟ್ರಸ್ಟಗೆ ಒದಗಿಸಬೇಕಾದಲ್ಲಿ ಸರ್ಕಾರದಿಂದ ಪ್ರತ್ಯೇಕ ಸಹಮತಿ ಪಡೆಯಬೇಕಾಗಿರುತ್ತದೆ.

ಈ	ದಕ್ಷಿಣ ಪಿನಾಕಿನಿ ಪುನರ್ ಜೀವನದ ಬಗ್ಗೆ ಕೆಲ ಹಂತದಲ್ಲಿ ಆಕ್ಷೇಪಗಳು ಕೇಳಿಬಂದಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಆ ಆಕ್ಷೇಪಣೆಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಉ	ಈ ಯೋಜನೆಗೆ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ ಮತ್ತು ಹಸಿರು ಪೀಠದಿಂದ ಒಪ್ಪಿಗೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಕಡತ ಸಂಖ್ಯೆ: ಸನೀಇ 25 ಎಲ್‌ಸಿಕ್ಯೂ 2020

(ಜೆ.ಸಿ ಮಾಧುಸ್ವಾಮಿ)

ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು